


ಗುಡಿಯ ಕಡೆಗೆ ಬಂದ. ಬಂದವನಿಗೆ, ದೀಪದ ಬೆಳಕಿನಲ್ಲಿ ಕಾಣಿಕೆಯ ಹುಂಡಿ ಕಣ್ಣಿಗೆ ಬಿದ್ದು ಅಪ್ಪನ ಮಂಗಳಾರತಿ ತಟ್ಟೆಗಲ್ಲದೆ, ದಿನವೂ ಹುಂಡಿಗೂ ಕಾಸು ಬೀಳುತ್ತಿದ್ದುದು ಶೀನಿಗೆ ನೆನಪಾಯಿತು. ಬೀಗವನ್ನು ಜಗ್ಗಿ, ಕೈಯ್ಯಲ್ಲಿದ್ದ ಕಲ್ಲಿನಿಂದ ಕುಟ್ಟಿ ಅಗುಳಿಯನ್ನು ಸಡಿಲಿಸಿದ. ತಂದೆಯ ಮುಂದೆ ನಿಂತು ಹಲ್ಲು ಕಿರಿದು, ಹೊಡೆಸಿಕೊಳ್ಳುವ ಬದಲು ದೇವರ ದುಡ್ಡನ್ನೇ ಆಸ್ತಿಭಾಗ ಎಂದುಕೊಂಡು ಹುಂಡಿಯನ್ನು ಅವುಚಿಕೊಂಡು ಗುಡಿಯ ಫಾಸಲೆ ಬಿಟ್ಟು ಬರಬೇಕಾದರೆ ಅವನ ಎದುರು ಬಂದವಳು ರಾಜಿ...

ಮದುವೆಯಾದ ನಂತರ ಅಯ್ಯನವರು ರಾಜಿಗೂ ಅವಳ ಗಂಡ ತಿರುಮಲನಿಗೂ ಗುಡಿಯ ಮುಂದಿನ ವಪ್ಪಾರೆಯಲ್ಲಿ ವಾಸಕ್ಕೆ ಇರಿಸಿದ್ದರಿಂದ ಅವಳು ಅಲ್ಲಿಗೆ ಬಂದದ್ದು ಅನಿರೀಕ್ಷಿತವೇನಾಗಿರಲಿಲ್ಲ. ರಾಜಿಗೆ ಗಂಡು ಹುಡುಕುವುದು ನರಸಿಂಹಯ್ಯನವರಿಗೆ ಎಷ್ಟು ಪ್ರಯಾಸವಾಯಿತೆಂದರೆ, ಮಗಳ ಮನೆವಾರ್ತೆಯನ್ನು ಒಪ್ಪುತ್ತ 'ಊರ ಮೇಲಿನ ಅದೆಷ್ಟೋ ಮೂಲಾ ನಕ್ಷತ್ರದ ಹೆಣ್ಣುಗಳಿಗೆ ಲಗ್ನ ಕಟ್ಟಿರುವೆ. ಆದರೆ ಮುಖ ಚೆಂದವೇ ಇರುವ ಈ ಮಾತಿಲ್ಲದ ಮೂಗಿಗೆ ಒಂದು ಗಂಡು ಗತಿಯಿಲ್ಲ,' ಎಂದು ಗೋಳಾಡುತ್ತಿದ್ದರು.

ಇಂಥ ವೇಳೆ ಅದೇ ನರಸೀಪುರಕ್ಕೆ ನವಗ್ರಹಶಾಂತಿಗೆ ಹೋಗಿದ್ದ ಅಯ್ಯನವರಿಗೆ ಅಲ್ಲಿ ಅಡುಗೆಯವರ ಹುಡುಗ ತಿರುಮಲ ಕಣ್ಣಿಗೆ ಬಿದ್ದನಾದರೂ ಅವನನ್ನು ಕುರಿತಾಗಿ ಅವನ ಮನೆಯವರೇ, 'ಮಗ ಭವಿಷ್ಯವಿಲ್ಲದವನು. ಆಗಾಗ್ಗೆ ಮನೆ ಬಿಡುವುದು ಅವನ ಚಾಳಿ, ಇನ್ನು ಸಂಪಾದನೆ ವಿಷಯ ಎತ್ತಿದರೆ, ನಮ್ಮವರನ್ನು ಇತ್ತೀಚೆಗೆ ಜನ ಅಡುಗೆ ಕೆಲಸಕ್ಕೆ ಕರೆಯುವುದೇ ತಪ್ಪುತ್ತಿದೆಯಲ್ಲ? ಆಯಾ ಜಾತಿಗಳಲ್ಲಿ ಅವರವರ ಅಡುಗೆಯವರೇ ಹುಟ್ಟಿಕೊಂಡು ಸೌಟು, ತಟ್ಟೆ ಆಡಿಸುತ್ತಿದ್ದಾರಲ್ಲಾ. ಇನ್ನು ಸರ್ಕಾರಿ ಕೆಲಸಕ್ಕೆ ಬೇಕಾದ ವಿದ್ಯೆಯೂ ಇವನಿಗಿಲ್ಲ,' ಎಂದು ಇದ್ದ ವಿಷಯ ತಿಳಿಸಿದರು. ಇದನ್ನು ಕೇಳಿದ ನರಸಿಂಹಯ್ಯನವರು 'ಮಗಳ ಜಾತಕದಲ್ಲಿ ನಂಬಿಕೆ ಇಡಿ. ಎರಡೂ ಕುಂಡಲಿಗಳು ಸೇರಿದರೆ ಏನಾದರೂ ದಾರಿ ಕಾಣಬಹುದು. ಸಂತಾನ ಪ್ರಾಪ್ತಿಯಾದಲ್ಲಿ ಜವಾಬ್ದಾರಿ ಬರಬಹುದು,' ಎಂದು ಲಗ್ನ ನೆರವೇರಿಸಿ, ತಮ್ಮ ಪೂಜೆಯ ಹನುಮಂತನ ಗುಡಿಯ ಎದುರಿನ ವಪ್ಪಾರೆಯಲ್ಲೇ ವಾಸಕ್ಕೆ ಜಾಗ ಮಾಡಿದ್ದರು...

ರಾಜಿಗೆ ಗುಡಿಯಿಂದ ಹೊರಗೆ ಬೀಳುತ್ತಿದ್ದ ಶೀನಿಯ ಕೈಯಲ್ಲಿ ಏನಿದೆ ಎಂದು ಅರಿಯದಾಯಿತು. ಇಷ್ಟು ಹೊತ್ತಿನಲ್ಲಿ ಇವನು ಒಳಗೆ ನುಗ್ಗಿದ್ದು ಯಾಕೆ? ಇವನು ಎಂದೂ ಇತ್ತ ಸುಳಿದವನೇ ಅಲ್ಲ. ಅಪ್ಪನ ಪೂಜೆಗೂ ಇವನ ನಿತ್ಯ ಜಗಳಕ್ಕೂ ಎಲ್ಲಿಗೆಲ್ಲಿಯ ಸಂಬಂಧ. ಅಪ್ಪನಿಗೆ ಇಷ್ಟವಾದ ಈ ಪ್ರಾಣ ದೇವರನ್ನು ಬೈದು ಇನ್ನು ಈ ಊರ ಎಲ್ಲೆ, ಮನೆ ಮುಟ್ಟುವುದಿಲ್ಲ ಅಂತ ಹೇಳಿ ಹೋದರೂ ಪುನಃ ಬಂದಿದ್ದಾದರೂ ಯಾಕೆ ಅಂದುಕೊಂಡಳು. ಹಾಗೆಯೇ ಈ ಪಟಿಂಗ ನನ್ನನ್ನೂ ತೊರೆಯವನೇ ಎಂಬ ವ್ಯಥೆಯೂ ಒಂದು ಕ್ಷಣ ಸುಳಿಯಿತು. ಶೀನಿಗೂ ತಾನು ದುಡ್ಡು ಕದ್ದದ್ದನ್ನು ಇವಳು ನೋಡಿಬಿಟ್ಟಳೇ ಎಂಬ ಅನುಮಾನ ಹತ್ತಿ, ಮನೆಯಲ್ಲಿ ಹೇಳಬೇಡ ಅನ್ನಲೇ ಅಂದುಕೊಂಡ. ಇವಳಿಗೆ ಹಾಗೆ ಹೇಳುವುದರಿಂದೇನು ಪ್ರಯೋಜನ. ಇವಳಿಗೆ ನಾಲಿಗೆಯೇ ಇಲ್ಲವಲ್ಲ, ಎಂದು ಮುಖದಲ್ಲಿ